ಕನ್ನಡಪ್ರಭ

# ಕಾರ್ಪೊರೇಟ್ ಹಾವಳಿಯಿಂದ ನಮ್ಮ ಪಾರಂಪರಿಕ ತಾಣ, ಸ್ಮಾರಕಗಳನ್ನು ದೂರವಿರಿಸಬೇಕು

## ಡಿ ಹಾಲಬಾ ಪ್ರಶಸ್ತಿ ಪುರಸ್ಕೃತ ಕಲಾ ಇತಿಹಾಸ ತಜ್ಞೆ ಡಾ ಚೂಡಾಮಣಿ ನಂದಗೋಪಾಲ್ ಅವರು ಖುಷಿಯೊಂದಿಗೆ ಹಂಚಿಕೊಂಡ ಮುಕ್ತ ಮಾತು

• **ಸಿ ಎಸ್ ಶಶಿಧರ್** ಕಲಾವಿದ

ಭರತನಾಟ್ಯ, ಶಿಲ್ಪ ಮತ್ತು ದೃಶ್ಯಕಲೆ, ಕರಕುಶಲಕಲೆ, ಪುರಾತತ್ವಶಾಸ್ತ್ರ, ಆಭರಣಕಲಾ ಇತಿಹಾಸ, ಸಂಗೀತ ಇತ್ಯಾದಿ ಕ್ಷೇತ್ರಗಳಲ್ಲಿ ಆಳವಾದ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಡಾ ಚೂಡಾಮಣಿ ನಂದಗೋಪಾಲ್

**DR. CHOODAMANI INTERVIEW**

ಅನೇಕ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. ಇತ್ತೀಚೆಗೆ ದೃಶ್ಯಕಲೆಯಲ್ಲಿ ಶಿಷ್ಟ ಸಾಧನೆಗಾಗಿ ನೀಡಲಾಗುವ ಡಿ ಹಾಲಬಾ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಯುನೆಸ್ಕೋ, ಯುಎನ್ಎಸ್ ಡಬ್ಲ್ಯು (ಆಸ್ಟ್ರೇಲಿಯಾ), ಇಂಗ್ಲೆಂಡ್‌ನ ನೆಹರೂ ಕೇಂದ್ರ, ಇತ್ಯಾದಿಗಳಿಗೆ ಸಂಶೋಧನಾ ಫೆಲೋಶಿಪ್‌ಗೆ ಆಯ್ಕೆಯಾಗಿ ತಮ್ಮ ಸಂಶೋಧನಾ ಲೇಖನಗಳನ್ನು ಮಂಡಿಸಿದ್ದಾರೆ.

ಪ್ರಸ್ತುತ ಜೈನ್ ವಿಶ್ವವಿದ್ಯಾಲಯದ ಮಾನವಶಾಸ್ತ್ರ ಭಾಗದ ಡೀನ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

■ **ಮೂಲತಃ ಈಶ್ವರನು ನಿರಾಕಾರನೆಂದು ತಿಳಿದಿದ್ದರೂ ಹಿಂದೂ ಧರ್ಮಪರಂಪರೆಯಲ್ಲಿ ಕಂಡುಬರುವ ಮಾನವಾಕೃತಿ ದೈವೀಕರಿಸಿರುವ ಮೂರ್ತಿಗಳನ್ನೇ ಆರಾಧಿಸುತ್ತಾ ಬಂದಿದ್ದೇವೆ. ಈ ಬಗ್ಗೆ ನಿಮ್ಮ ನಿಲುವು ಏನು?**

ನಿಜ. ಅದಕ್ಕೆ ಕಾರಣ; ನಾವು ನಮ್ಮೆಲ್ಲ ಪ್ರಶ್ನೆಗಳಿಗೆ ವೇದೋಪನಿಷತ್‌ಗಳಲ್ಲಿ ಉತ್ತರ ಹುಡುಕುವುದು. ಋಗ್ವೇದ ಯಜುರ್ವೇದಗಳಲ್ಲಿ ಬರುವ ಅನೇಕ ಶ್ಲೋಕಗಳಲ್ಲಿ ದೇವದೇವತೆಗಳ ವರ್ಣನೆಯಿದೆ. ಅಲ್ಲಿ ದೇವತೆಗಳ ಸ್ವಭಾವ, ಶಕ್ತಿ ಮತ್ತು ಕಾರ್ಯ; ಅಂದರೆ, ರೂಪ ಸ್ವರೂಪಕ್ಕಿಂತ ಹೆಚ್ಚಾಗಿ ದೇವತೆಗಳ ಕ್ರಿಯಾತ್ಮಕ ಅಂಶಗಳಿಗೇ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವುದನ್ನು ಕಾಣಬಹುದು. ಉದಾಹರಣೆಗೆ ವರುಣ, ವರುಣನ ಕ್ರಿಯಾತ್ಮಕ ಶಕ್ತಿಯೇನು? ಇವೆಲ್ಲವೂ ಶಕ್ತಿಯ ವಿವಿಧ ರೂಪಗಳೇ ಆಗಿವೆ. ಇಡೀ ಶಿವ್ವ ಶಕ್ತಿಯ ಪ್ರತೀಕವೇ ಆಗಿದೆ. ವಿವಿಧ ಶಕ್ತಿಗಳ ಕಾರ್ಯ ನಿರ್ವಹಣಾ ವೈಖರಿಗನುಗುಣವಾಗಿ ವಿವಿಧ ದೇವಸ್ವರೂಪಗಳನ್ನು ಚಿತ್ರಿಸಿಕೊಂಡಿದ್ದೇವೆ. ಆದರೆ ಸಮಕಾಲೀನ ದೃಷ್ಟಿಯಲ್ಲಿ ಈ ದೇವಸ್ವರೂಪಗಳು ನಿರರ್ಥಕವೆನಿಸಬಹುದು. ಆದರೆ ಭಕ್ತನೊಬ್ಬ ಕೂತು ಧ್ಯಾನಿಸಿದಾಗ ಇವೆಲ್ಲ ದೇವ ರೂಪಗಳಿಗೊಂದು ಅರ್ಥ ಮೂಡುತ್ತದೆ. ಈ ಸ್ವರೂಪಗಳೇ ಸಾಮಾನ್ಯ ಜನರ ಕಲ್ಪನೆಗೊಂದು ಆಧಾರವಾಗುತ್ತವೆ.

■ **ಕಲಾಕ್ಷೇತ್ರಗಳಲ್ಲಿ ನಿಮಗೆ ಅನುಭವ ಮತ್ತು ಸಂಶೋಧನೆಯ ಹಿನ್ನೆಲೆಯಿದೆ. ಭಾರತೀಯ ಕಲಾ ಇತಿಹಾಸದಲ್ಲಿ ನಮ್ಮ ಪುರಾತನ ಅವಶೇಷಗಳಲ್ಲಿ ನಮಗೆ ಚಿತ್ರಕಲೆಗಿಂತ ಹೆಚ್ಚಾಗಿ ಕಾಣಸಿಗುವುದು ಶಿಲ್ಪಕಲೆಯೇ ಇದಕ್ಕೆ ಕಾರಣವೇನು?**



ಇದಕ್ಕೆ ಮುಖ್ಯ ಕಾರಣ ಚಿತ್ರಕಲೆಯು ಶಿಲ್ಪಕಲೆಯಷ್ಟು ಭದ್ರವಿಲ್ಲ, ಆದರೂ ನಮಗೆ ದೊರಕಿರುವ ಶಾಸನಗಳ ಪ್ರಕಾರ ಶಿಲ್ಪಕಲೆಯಂತೆ ಚಿತ್ರಕಲೆಯೂ ಇತ್ತೆಂಬುದು ತಿಳಿಯುತ್ತದೆ. ಆಗಿನ ಎಲ್ಲ ದೇವಾಲಯಗಳಲ್ಲಿ ಕಾಷ್ಠಮಂಟಪವೊಂದಿರುತ್ತಿತ್ತು. ಈ ಮಂಟಪಗಳ ಒಳಗೆ ಚಿತ್ರಕಲೆಯ ಪ್ರದರ್ಶನವಿರುತ್ತಿತ್ತು. ನಮ್ಮಲ್ಲಿ ಚಿತ್ರಕಲೆ ಶಿಲ್ಪಕಲೆಯಷ್ಟು ಪ್ರಾಮುಖ್ಯತೆ ಪಡೆದಿಲ್ಲವೆನ್ನುವ ಅನುಮಾನಗಳಿಗೆ ನಮ್ಮಲ್ಲಿ ಚಿತ್ರಕಲೆಯ ಬಗ್ಗೆ ಪ್ರತ್ಯೇಕ ಪಠ್ಯಲ್ಲದಿರುವುದೇ ನೆಲೆ. ವಿಷ್ಣುಪುರಾಣದ ಚಿತ್ರಸೂತ್ರ, ಮತ್ತು ಮನಸೋಲ್ಲಾಸದಲ್ಲಿ ಅಲ್ಲಲ್ಲಿ ಉಲ್ಲೇಖಗಳಿದ್ದರೂ, ಅವೆಲ್ಲ ಶಿಲ್ಪ ಮತ್ತು ವಾಸ್ತುಶಾಸ್ತ್ರದ ಭಾಗಗಳಾಗಿ ಕಂಡುಬರುತ್ತವೆ.

■ **ದೇಶದ ಪ್ರಾಚ್ಯವಸ್ತು, ಸ್ಮಾರಕಗಳ ಸಂರಕ್ಷಣೆಯ ಸ್ಥಿತಿಗತಿ ಬಗ್ಗೆ ಏನೆನಿಸುತ್ತದೆ?**

ಇಲ್ಲಿ ಅನೇಕ ತೊಡಕುಗಳಿವೆ. ಮೊದಲನೆಯದಾಗಿ ನಮ್ಮ ಸ್ಮಾರಕಗಳನ್ನು ಪುನರುಜ್ಜೀವನಗೊಳಿಸಲು ಸೂಕ್ತ ತರಬೇತಿಯುಳ್ಳ ಕೆಲಸಗಾರರು ಸಿಗುವುದು ಕಡಿಮೆ. ಇನ್ನೊಂದು ಮುಖ್ಯವಾದ ತೊಡಕು ಋತುಮಾನ ವೈಪರೀತ್ಯಗಳು. ಎಲ್ಲದಕ್ಕೂ ಸರ್ಕಾರವನ್ನು ಹೊಣೆಯಾಗಿಸುವುದು ಸರಿಯಲ್ಲ, ಪ್ರಾಚ್ಯವಸ್ತುಗಳನ್ನು ಉಳಿಸಿಕೊಂಡು ಹೋಗುವ ಕರ್ತವ್ಯ ನಮ್ಮೆಲ್ಲರದ್ದೂ ಆಗಿರುತ್ತದೆ. ಒಂದು ಊರಿನಲ್ಲಿ ಒಂದು ಪುರಾತನ ದೇವಸ್ಥಾನವಿದ್ದರೆ ಅದರ ರಕ್ಷಣೆ ಇಡೀ ಊರಿನವರದ್ದಾಗಿರುತ್ತದೆ. ಜನರಿಗೆ ಬದ್ಧತೆಯಿರಬೇಕು. ಹಿಂದೆ ಅನುಷ್ಠಾನ ಜವಾಬ್ದಾರಿ ಹೊತ್ತ ಆಡಳಿತ ಮಂಡಳಿಯಲ್ಲೇ ಬದ್ಧತೆ ಮತ್ತು ವಿಷಯದ ಆಳ ತಿಳುವಳಿಕೆ ಮತ್ತು ಆಸಕ್ತಿಯುಳ್ಳ ಅಧಿಕಾರಿಗಳಿರುತ್ತಿದ್ದರು. ಈಗಿಲ್ಲ, ಕಾರ್ಪೊರೇಟ್ ಹಾವಳಿಯಿಂದ ಹೆರಿಟೇಜ್ ಸ್ಮಾರಕಗಳನ್ನು ದೂರವಿರಿಸಬೇಕು. ಏಕೆಂದರೆ ಅವರ ಯೋಚನೆಯೆಲ್ಲ ಬರಿ ಲಾಭದೆಡೆ ಮಾತ್ರ.

■ **ಸಮಕಾಲೀನ ಭಾರತೀಯ ಚಿತ್ರಕಲೆಯಲ್ಲಿ ನಮ್ಮ ಮೂಲ ಭಾರತೀಯ ಶೈಲಿಯ ಗೈರು ಎದ್ದುಕಾಣುತ್ತದೆಯಲ್ಲ**

ಆಂಗ್ಲರ ಆಡಳಿತಾವಧಿಯಲ್ಲಿ ನಮ್ಮ ದೇಶದಲ್ಲಿ ಲಾಹೋರನ್ನೂ ಒಳಗೊಂಡಂತೆ ನಾಲ್ಕು ವಿವಿಧ ಕಲಾಶಾಲೆಗಳನ್ನು ಸ್ಥಾಪಿಸಲಾಯಿತು. ಆದ್ದರಿಂದ ನಮ್ಮಲ್ಲಿ ಯೂರೋಪ್‌ನ ಚಿತ್ರರಚನಾ ಶೈಲಿಯ ಪ್ರಭಾವ ಎದ್ದು ಕಾಣುತ್ತಿತ್ತು. ನಂತರ ಬಂಗಾಳದ ರಿವೈವಲ್ ಮೂವ್‌ಮೆಂಟ್‌ನ ಮೂಲಕ ಭಾರತೀಯ ದೃಶ್ಯಕಲಾದರು ತಮ್ಮತನವನ್ನು ಕಂಡುಕೊಳ್ಳುವುದರಲ್ಲಿ ಸಫಲರಾದರು. ಹಾಗಾಗಿ ನಿಮ್ಮ ಅಭಿಪ್ರಾಯ ಕೆಲಮಟ್ಟಿಗೆ ಸರಿ.

■ **ಚಿತ್ರಕಲಾ ಪರಿಷತ್ತಿನ ಕಲಾ ಇತಿಹಾಸ ವಿಭಾಗದ ಮುಖ್ಯಸ್ಥರಾಗಿದ್ದವರು ನೀವು, ಅಲ್ಲಿನ ತಮ್ಮ ಅನುಭವ ಹೇಗಿತ್ತು?**

ನಾನು ವಿಭಾಗದ ಮುಖ್ಯಸ್ಥೆಯಾಗಿದ್ದಾಗ ವಿಭಾಗವಿನ್ನೂ ಆರಂಭದ ಹಂತದಲ್ಲಿತ್ತು. ಅದನ್ನು ಪದವಿ ಮತ್ತು ಸ್ನಾತಕೋತ್ತರ ಮಟ್ಟದವರೆಗೆ ಮುಟ್ಟಿಸುವಲ್ಲಿ ಶ್ರಮಿಸಿದೆ. ಪರಿಷತ್ತಿನ ದಿನಗಳು ನನ್ನ ಜೀವನದ ಅತ್ಯುತ್ತಮ ನೆನಪುಗಳು. ಅಲ್ಲದೇ ನಾನು ಇಂಗ್ಲೆಂಡಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಮ್ಯೂಸಿಯಂನ ಭಾರತೀಯ ಕಲಾಸಂಗ್ರಹದ ಫೆಲೋ ಕುರೇಟರ್ ಆಗಿದ್ದು, ನನ್ನ ಕಲಾಬದುಕಿಗೆ ಸಾರ್ಥಕತೆ ಕೊಟ್ಟಿತು.